# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಜಿಎಂ/3036–2022
ಮಂಡನಾಧಿಕಾರಿಗಳ ಶಾಖೆ : ಪಿಓ–ಎ.ಆರ್.ಇ–1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 08/03/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಹನುಮಂತಪ್ಪ, ಎಸ್.ಡಿ.ಎ. ಇಎಸ್‌ಟಿ ಮತ್ತು ಆಡಳಿತ ವಿಭಾಗ–4, ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ (ನಿವೃತ್ತ)–** ಆದ ಇವರು ಸರ್ಕಾರಿ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಗದಗ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಹನುಮಂತಪ್ಪ, ಎಸ್.ಡಿ.ಎ. ಇಎಸ್‌ಟಿ ಮತ್ತು ಆಡಳಿತ ವಿಭಾಗ–4, ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ (ನಿವೃತ್ತ)** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರು, ದೂರುದಾರರಾದ **ಶ್ರೀ ಆನಂದ ತಂದೆ: ತಮ್ಮಣ್ಣ ಲಕ್ಷ್ಮೀಗುಡಿ, ಚಿಂಚಲ್ಲಿ ಗ್ರಾಮ,ತಾಲೂಕು/ಜಿಲ್ಲೆ: ಗದಗ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ತಮ್ಮ ಕೆಲಸದ ಸಂಬಂಧ ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ:** ದೂರುದಾರರು ತನ್ನ ದೂರಿನಲ್ಲಿ, ತಾನು ಸಿವಿಲ್ ಗುತ್ತಿಗೆ ಕಾಮಗಾರಿ ಮಾಡಲು ಕ್ಲಾಸ್–4–ಲೈಸೆನ್ಸ್ ತೆಗೆಸುವ ಸಂಬಂಧ, ದಿ: 13/07/2020 ರಂದು ಬೆ: 11–30 ಗಂಟೆಗೆ ಎದುರುದಾರರ ಕಛೇರಿಗೆ ಬಂದಾಗ, ಎದುರುದಾರರು, ದೂರುದಾರರ ದಾಖಲಾತಿಗಳನ್ನು ಪರಿಶೀಲಿಸಿ, ಒಟ್ಟು 5000/– ಫೀ ಆಗುತ್ತದೆ ಅಷ್ಟು ಹಣ ತೆಗೆದುಕೊಂಡು ಬರ್ರೀ ಎಂದು ಹೇಳಿರುತ್ತಾರೆ. ಅದರಂತೆ, ದಿ: 14–07–2020 ರಂದು, ದೂರುದಾರರು ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು, ಎದುರುದಾರರಿಗೆ ಕೊಟ್ಟು, ಲೈಸೆನ್ಸ್ ಫೀ ಎಂದು 3000/– ರೂ ಕೊಟ್ಟಾಗ, ಎದುರುದಾರರು 2500/– ರೂ ಚಲನ್ ಫೀ ಆಗುತ್ತದೆ. 500/– ರೂ ಚಲನ್ ಹಾಕುವವರಿಗೆ ಕೊಡಬೇಕು, ತನಗೇನು ಉಳಿಯುವುದಿಲ್ಲ ಎಂದು, ಇನ್ನುಳಿದ 2000/– ರೂ.ಗಳನ್ನು ಲಂಚವಾಗಿ ಕೊಡಲು ಪರೋಕ್ಷವಾಗಿ ದೂರುದಾರರಲ್ಲಿ ಬೇಡಿಕೆ ಇಟ್ಟಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್ ನಲ್ಲಿ

ರೆಕಾರ್ಡ್ ಮಾಡಿಕೊಂಡು, ದೂರುದಾರರು ಲೈಸೆನ್ಸ್ ಒಯ್ಯುವ ಕಾಲಕ್ಕೆ 2000/- ರೂ ಕೊಡುವುದಾಗಿ, ಎದುರುದಾರರಿಗೆ ಹೇಳಿರುತ್ತಾರೆ. ಗುತ್ತಿಗೆ ಪರವಾನಿಗೆ ರೆಡಿಯಾಗಿದ್ದು, ಎದುರುದಾರರ ಸಹಿಗೆ ಬಾಕಿ ಇದ್ದು, ದೂರುದಾರರು ಇನ್ನುಳಿದ 2000/- ರೂಗಳನ್ನು ಕೊಟ್ಟಲ್ಲಿ ಮಾತ್ರ, ಗುತ್ತಿಗೆ ಪರವಾನಿಗೆಗೆ ಎದುರುದಾರರ ಸಹಿ ಆಗುತ್ತದೆ, ಎದುರುದಾರರು 2000/- ರೂ ಲಂಚದ ಹಣವನ್ನು ಪಡೆದ ನಂತರವಷ್ಟೆ ಲೈಸೆನ್ಸ್‌ಗೆ ಸಹಿ ಮಾಡಿಸುವ ಇರಾದೆಯಲ್ಲಿದ್ದುದರಿಂದ, ದೂರುದಾರರು ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ದಿ: 21/7/2020 ರಂದು, ದೂರನ್ನು ಪೊಲೀಸ್ ಉಪಾಧೀಕ್ಷಕರು, ಎ.ಸಿ.ಬಿ.ಠಾಣೆ, ಗದಗ ಇವರಿಗೆ ನೀಡಿರುತ್ತಾರೆ. ಸದರಿ ದೂರಿನ ಆದಾರದ ಮೇಲೆ, ಮೊ.ಸಂ: 10/2020 ಭ್ರಷ್ಟಾಚಾರ ಕಾಯ್ದೆ 1988ರ ಕಲಂ 7(ಎ) ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

3. ದಿನಾಂಕ: 21/07/2020 ರಂದು ತನಿಖಾಧಿಕಾರಿಯವರು, ಪಂಚರಾದ ಶ್ರೀ ಕೃಷ್ಣಾ, ಪಂಚ-1, ಶ್ರೀ ರಾಜೀವ್ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ ರೂ.2,000/- ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ-1 ರವರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ರವರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ (ಡಿನಾಮಿನೇಷನ್ 500 x 3, 100 x 5). ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ, ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ ಲಂಚದ ಹಣ ರೂ.2,000/- ಗಳನ್ನು ಎಣಿಸಿ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ದೂರುದಾರರ ಧರಿಸಿದ ಶರ್ಟಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ, ಅಥವಾ ಅವರು ಹೇಳಿದವರಿಗೆ ಕೊಟ್ಟ ನಂತರ, ದೂರುದಾರರು ತನ್ನ ಕೈ ವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ, ಸಂಜ್ಞೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು, ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಂಚ-1 ರವರಿಗೆ ಸೂಚನೆಯನ್ನು ನೀಡಿ, ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸುವಂತೆ ಹಾಗೂ ಕೇಳಿದಾಗ, ವಿವರಿಸುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ದಿನಾಂಕ: 21/07/2020ರಂದು ಬೆಳಿಗ್ಗೆ: 10-15 ರಿಂದ ಬೆಳಿಗ್ಗೆ 11-15 ಗಂಟೆಯವರೆಗೆ ಮಾಡಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ.

4. ಅದೇ ದಿನ, ದಿನಾಂಕ: 30/5/2017 ರಂದು ತನಿಖಾಧಿಕಾರಿಯು ದೂರುದಾರರನ್ನು, ಪಂಚರನ್ನು, ಹಾಗೂ ಸಿಬ್ಬಂದಿಯನ್ನು ಕರೆದುಕೊಂಡು, ಎದುರುದಾರರ ಕೆಲಸ ನಿರ್ವಹಿಸುವ ಕಛೇರಿ ಬಳಿ ಬಂದಿರುತ್ತಾರೆ. ಆಗ ಮತ್ತೆ ತನಿಖಾಧಿಕಾರಿ ದೂರುದಾರರಿಗೆ ಮತ್ತು ಪಂಚ-1 ರವರೆಗೆ ಸೂಚನೆಯನ್ನು ಕೊಟ್ಟು, ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.25 ಆಗಿರುತ್ತದೆ. ನಂತರ, ದೂರುದಾರರು ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದ ಕೊಠಡಿಗೆ ಪ್ರವೇಶ ಮಾಡಿ, ತನ್ನ ಕೆಲಸದ ಬಗ್ಗೆ ವಿಚಾರಿಸಿ, ತನ್ನ ಶರ್ಟ್ ಜೇಬಿನಿಂದ ಲಂಚದ ಹಣವನ್ನು ಎದುರುದಾರರಿಗೆ ಕೊಟ್ಟಾಗ, ಎದುರುದಾರರು ಸದರಿ ಹಣವನ್ನು ಬಲಗೈ ಇಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಮ್ಮ ಬಳಿ ಇದ್ದ ಹ್ಯಾಂಡ್ ಬ್ಯಾಗ್‌ನ ಒಂದನೇ ಪಾಕೇಟ್‌ನಲ್ಲಿ ಇರಿಸಿ, ಜಿಪ್ಪನ್ನು ಎಳೆದು ಬ್ಯಾಗನ್ನು ತಮ್ಮ ಪಕ್ಕದಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.35 ಆಗಿರುತ್ತದೆ. ನಂತರ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ತನಿಖಾಧಿಕಾರಿಯು ದೂರುದಾರರ ಸೂಚನೆಯನ್ನು ಅನುಸರಿಸಿ, ತಾನು ಹಾಗೂ ಪಂಚ-2 ಮತ್ತು ಸಿಬ್ಬಂದಿಯೊಂದಿಗೆ ದೂರುದಾರರ ಹತ್ತಿರ ಬಂದು, ಮಾಹಿತಿ ಪಡೆದು, ದೂರುದಾರರು, ತನ್ನಿಂದ ಲಂಚದ ಹಣ ಪಡೆದ ಎದುರುದಾರರನ್ನು, ತನಿಖಾಧಿಕಾರಿಗೆ ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯವರು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯು ಎದುರುದಾರರನ್ನು ಕುರಿತು, ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸುವಂತೆ, ಹೇಳಿದಾಗ, ಎದುರುದಾರರು ತಮ್ಮ ಹ್ಯಾಂಡ್ ಬ್ಯಾಗನ್ನು ಹಾಜರುಪಡಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು ಎದುರುದಾರರ ಬ್ಯಾಗ್ ನಲ್ಲಿ ಇದ್ದ ಲಂಚದ ಹಣವನ್ನು ಹೊರತೆಗೆದು, ಹಾಜರುಪಡಿಸಿದಾಗ, ಪಂಚ-2 ರವರು ಸದರಿ ಹಣದ ಮೌಲ್ಯ ಮತ್ತು ನಂಬರುಗಳನ್ನು ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದ ಮೌಲ್ಯ ಮತ್ತು ನಂಬರುಗಳಿಗೆ ತಾಳೆ ಮಾಡಿ ಖಾತ್ರಿಪಡಿಸಿಕೊಂಡ ನಂತರ, ತನಿಖಾಧಿಕಾರಿ ಸದರಿ ಲಂಚದ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

5. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿಯು ಕಾಟನ್ ತುಂಡಿನಿಂದ (ಅರಳೆ) ಎದುರುದಾರರು ಲಂಚದ ಹಣವನ್ನು ಇಟ್ಟುಕೊಂಡಿದ್ದ, ಹ್ಯಾಂಡ್ ಬ್ಯಾಗ್‌ನ ಪಾಕೇಟ್‌ನ ಒಳಭಾಗವನ್ನು ಒರೆಸಿ, ಸದರಿ ಕಾಟನ್‌ನನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯು ಸದರಿ ಬ್ಯಾಗ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯು ದೂರುದಾರರಿಗೆ ಸಂಬಂಧಿಸಿದ ಕಡತವನ್ನು ಎದುರುದಾರರಿಂದ ಪಡೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ಎದುರುದಾರರು ಲಂಚದ ಹಣ ಪಡೆದ ಬಗ್ಗೆ, ತನ್ನ ಸಮಜಾಯಿಷಿಕೆಯಲ್ಲಿ ನೀಡಿದ್ದು, ತನಿಖಾಧಿಕಾರಿಯು ಲಂಚದ ಹಣವನ್ನು . . . . **ಈ ಮೂಲಕ ಹರಿಕೆ ಮಾಡಿಕೊಳ್ಳುವುದೇನೆಂದರೆ, ಲಕ್ಷ್ಮೀಗುಡಿ ಇವರು 4ನೇ ದರ್ಜೆ ಗುತ್ತಿಗೆ**

**ನೊಂದಣೆಗಾಗಿ 2500/- ಗಳನ್ನು ಚಲನ್ ತುಂಬಲು ಕೇಳಿರುತ್ತೇನೆ. ಅದನ್ನು ಕೆ2 ನಲ್ಲಿ ತುಂಬಬೇಕಾಗಿರುವುದರಿಂದ ಕೇಳಿದ್ದು ಇರುತ್ತದೆ, ಅರ್ಜಿದಾರರಿಗೆ ಯಾವುದೇ ಒತ್ತಾಯ ಮಾಡಿ ಹಣ ಕೇಳಿರುವುದಿಲ್ಲ ಇತ್ಯಾದಿ ಹೇಳಿರುತ್ತಾರೆ. ಸದರಿ ಹೇಳಿಕೆ ಬಗ್ಗೆ ತನಿಖಾಧಿಕಾರಿಯು ದೂರುದಾರರ ಅಭಿಪ್ರಾಯ ಕೇಳಿದಾಗ, ಎದುರುದಾರರು ಗುತ್ತಿಗೆ ಪರವಾನಗಿ ಕೊಡಲು 5000/- ರೂ. ಕೇಳಿದರು, ತಾನು ಫೀ ಎಂದು 3000/- ಕೊಟ್ಟಾಗ, ಇನ್ನೂ ಎರಡು ಸಾವಿರ ಕೊಡುವಂತೆ ತಿಳಿಸಿದರು.** ಈ ಸಂಬಂಧವಾಗಿ ತನಿಖಾಧಿಕಾರಿಯು ಟ್ರಾಪ್ ಪಂಚನಾಮೆಯನ್ನು ದಿನಾಂಕ: 21/7/2020 ರಂದು ಬೆಳಿಗ್ಗೆ 11.35 ರಿಂದ ಮಧ್ಯಾಹ್ನ 2.45 ರವರೆಗೆ ಬರೆದಿರುತ್ತಾರೆ ಹಾಗೂ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿಕೊಂಡಿರುತ್ತಾರೆ ಹಾಗೂ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ.

6. ತನಿಖಾಧಿಕಾರಿಯು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

7. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

8. ದಿನಾಂಕ: 19/09/2022ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 19/12/2022 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ದೂರಿನಲ್ಲಿರುವ ವಿಚಾರಗಳನ್ನು ಅಲ್ಲಗಳೆದಿರುತ್ತಾರೆ. ದೂರುದಾರರು ಸಿವಿಲ್ ಗುತ್ತಿಗೆ ಕಾಮಗಾರಿ ಮಾಡಲು ಕ್ಲಾಸ್ - 4 ಲೈಸೆನ್ಸ್ ಪಡೆಯುವ ಸಂಬಂಧ ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕ 2500/- ರೂ.ಗಳನ್ನು ದಿ: 17/07/2020 ರಂದು ಗದಗ ಲೋಕೋಪಯೋಗಿ ಇಲಾಖೆ ವಿಭಾಗೀಯ ಕಛೇರಿಯಲ್ಲಿ ನನಗೆ ಕೊಟ್ಟಾಗ , ನಾನು 2000/- ರೂ. ಲಂಚದ ಹಣಕ್ಕಾಗಿ ಒತ್ತಾಯ ಮಾಡಿರುವುದಾಗಿ ಆಪಾದನೆ ಮಾಡಿರುತ್ತಾರೆ. ಈ ಸಂಬಂಧ, ತನಿಖಾಧಿಕಾರಿ ಸಲ್ಲಿಸಿರುವ ದೋಷಾರೋಪಣಾ ಪಟ್ಟಿ ಸುಳ್ಳಿನಿಂದ ಕೂಡಿರುತ್ತದೆ. ದೂರುದಾರರು ಸುಳ್ಳು ದೂರನ್ನು ತನ್ನ ವಿರುದ್ಧ ನೀಡಿರುವುದಾಗಿ, ಹಾಗೂ ವಹಿಸುವಿಕೆ ಪಂಚನಾಮೆಯನ್ನು ತನಿಖಾಧಿಕಾರಿ ತನಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಂಡಿರುತ್ತಾರೆ. ಟ್ರ್ಯಾಪ್ ಪಂಚನಾಮೆ ವೇಳೆಯಲ್ಲಿ ಲಂಚದ ಹಣವನ್ನು ಹಾಗೂ ಹ್ಯಾಂಡ್ ಬ್ಯಾಗ್‌ನ್ನು ಪ್ರಕ್ರಿಯೆಗೆ ಒಳಪಡಿಸಿ ಅಮಾನತ್ತುಪಡಿಸಿಕೊಂಡಿರುವ ಅಂಶವು ಸುಳ್ಳಾಗಿರುತ್ತದೆ. ಮುಂದುವರೆದು, ದೂರುದಾರರಿಗೆ ಸಂಬಂಧಿಸಿದ ಕೆಲಸ ತನ್ನ ಬಳಿ ಬಾಕಿ ಇರಲಿಲ್ಲ ಹಾಗೂ ತನ್ನ ಮೇಲೆ ವಿನಾಕಾರಣ ಪ್ರಕರಣ ದಾಖಲಿಸಿರುತ್ತಾರೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹಾಗೂ ರಾಸಾಯನಿಕ ತಜ್ಞರ ಪರೀಕ್ಷ ವರದಿಗಳು ಸೃಷ್ಟಿಸಿಕೊಂಡಿರುತ್ತಾರೆ. ತಾನು ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ, ಕರ್ತವ್ಯ ಲೋಪ ಎಸಗಿಲ್ಲ, ಕೆ.ಸಿ.ಎಸ್.ಆರ್. ನಿಯಮ ಉಲ್ಲಂಘಿಸಿರುವುದಿಲ್ಲ. ಆದ್ದರಿಂದ, ತನ್ನನ್ನು ಇಲಾಖಾ ವಿಚಾರಣೆಯಿಂದ ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಈ ಹಂತದಲ್ಲಿ ಪರಿಗಣಿಸಲು

ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

9. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ ಶ್ರೀ ಹನುಮಂತಪ್ಪ, ಇವರು ದಿನಾಂಕ: 31-12-2020ರಂದು ವಯೋನಿವೃತ್ತಿ ಹೊಂದಿದ್ದು, ಇವರ ವಿರುದ್ಧ ಶಿಸ್ತು ನಡವಳಿ ಕ್ರಮ ಜರುಗಿಸಲು ಮತ್ತು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರಡಿಯಲ್ಲಿ ಹಾಗೂ 214(2) (ಬಿ)(i) ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/3/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು